ಶ್ರೀ ಜೆ. ಎಸ್. ದೊಡ್ಡಮೇಟಿ —ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ರಾಜ್ಯದ ಆಭಾವ ಪ್ರದೇಶಗಳನ್ನು ಅಧ್ಯಯನ ಮಾಡಿ ದೀರ್ಘಾವಧಿ ಕ್ರಮಗಳನ್ನು ತೆಗೆದುಕೊಳ್ಳಲು ಶಿಫಾರಸ್ ಮಾಡಲು ಸರ್ಕಾರ ಒಂದು ಸಮಿತಿಯನ್ನು ನೇಮಕ ಮಾಡಿದೆ ಎಂದು ತಿಳಿಸಿದ್ದಾರೆ. ಆ ದೀರ್ಘಾವಧಿ ಕ್ರಮಗಳು ಯಾವುವು ಎಂದು ತಿಳಿಸುವಿರಾ ?

ಶ್ರೀ ವಿ. ಎಲ್. ಪಾಟೀಲ್.—ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂದು ವಿಚಾರ ಮಾಡುವ ಸಲುವಾಗಿ ಒಂದು ಸಮಿತಿಯನ್ನು ನೇಮಕ ಮಾಡಿದ್ದೇವೆ. ಬರಗಾಲ ಪರಿಸ್ಥಿತಿಯಲ್ಲಿ ಆಯಾ ಜಿಲ್ಲೆಗಳಲ್ಲಿ ನಾವು ಕೆಲವು ಕೆಲಸಗಳನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದೇನೆ.

ಶ್ರೀ ಜೆ. ಎಸ್. ದೊಡ್ಡಮೇಟಿ.—ಈ ದಿಸೆಯಲ್ಲಿ ತಾವು ತೆಗೆದುಕೊಂಡ ಕ್ರಮಗಳೇನು ಇದರ ಊರುಣ ಏನು ಎಂದು ಹೇಳುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಲಿಫ್ಟ್ ಇರಿಗೇಷನ್ ಕೆಲಸ, ಕೆರೆಗಳನ್ನು ಮಾಡುವ ಕೆಲಸ ಸಣ್ಣ ಸಣ್ಣ ನೀರಾವರಿಗಳನ್ನು ಮಾಡುವುದು, ಕೊಡಿಯುವ ನೀರಿನ ವ್ಯವಸ್ಥೆ ಮಾಡುವ ಕೆಲಸ, ಇದಕ್ಕಾಗಿಯೇ ನಾವು ಸಮಿತಿಯನ್ನು ನೇಮಕ ಮಾಡಿರುವುದು.

ಶ್ರೀ ವಸಂತ ಬಂಗೇರ.—ತಾವು ನೇಮಕ ಮಾಡಿರುವ ಸಮಿತಿ ಶಾಶ್ವತವಾಗಿರುತ್ತದೆಯೇ ?

ಶ್ರೀ ವಿ. ಎಲ್. ಪಾಟೀಲ್.—ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ.

ಸಹಕಾರಿ ಕ್ಷೇತ್ರದಲ್ಲಿ ದಿನ ಬಳಕೆ ವಸ್ತುಗಳ ಉತ್ಪಾದನೆ ಬಗ್ಗೆ.

*೬೪. ಶ್ರೀ ವಿ. ಎಸ್. ಆಚಾರ್ಯ (ಉಡುಪಿ).—ಮಾನ್ಯ ಸಹಕಾರಿ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

೧. ಕಡಿಮೆ ತಾಂತ್ರಿಕತೆಯೊಳಗೆ ಹೆಚ್ಚು ಉಪಯೋಗವಾಗುವ ದಿನ ಬಳಕೆಯ ವಸ್ತುಗಳನ್ನು ಸಹಕಾರ ಕ್ಷೇತ್ರದಲ್ಲಿ ಉತ್ಪಾದಿಸುವ ಬಗ್ಗೆ ಸರಕಾರದವರು ಏನಾದರೂ ವಿಶೇಷ ಯೋಜನೆಗಳನ್ನು ರೂಪಿಸಿದ್ದಾರೆಯೇ ?

೨. ಹಾಗಿದ್ದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂತಹ ಯೋಜನೆಗಳನ್ನು ರೂಪಿಸಿ ಸಹಕಾರಿ ಸಂಸ್ಥೆಗಳು ಮುಂದೆ ಬಂದಲ್ಲಿ ಯಾವ ರೀತಿಯಿಂದ ಪ್ರೋತ್ಸಾಹ ನೀಡಲಾಗುವುದು.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

೧. ಕಡಿಮೆ ತಾಂತ್ರಿಕತೆಯೊಳಗೆ ದಿನ ಬಳಕೆಯ ವಸ್ತುಗಳನ್ನು ಸಹಕಾರ ಕ್ಷೇತ್ರದಲ್ಲಿ ಉತ್ಪಾದಿಸಲು ರಾಜ್ಯ ಸರಕಾರವು ಪ್ರತ್ಯೇಕವಾಗಿ ವಿಶೇಷ ಯೋಜನೆಗಳನ್ನು ರೂಪಿಸಿಲ್ಲ. ಆದರೆ ದೆಹಲಿಯಲ್ಲಿರುವ ರಾಷ್ಟ್ರೀಯ ಸಹಕಾರಿ ವಿಕಾಸ ನಿಗಮವು ರೂಪಿಸಿರುವ ಯೋಜನೆಯ ಪ್ರಕಾರ ಲಭ್ಯವಿರುವ ಸಹಾಯದಿಂದ ಮತ್ತು ರಾಜ್ಯ ಸರಕಾರವು ಒದಗಿಸುವ ಹಣದಿಂದ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲು ಅವಕಾಶವಿದೆ.

(ಅ) ಯೋಜನೆಗೆ ತಗಲುವ ಒಟ್ಟು ವೆಚ್ಚದ ಶೇಕಡ ೬೫ ಹಣವನ್ನು ಸಹಕಾರಿ ನಿಗಮದ ಸಹಾಯದಿಂದ ಸಾಲ ರೂಪವಾಗಿ ಒದಗಿಸಲಾಗುವುದು.

(ಆ) ರಾಜ್ಯ ಸರಕಾರವು ಯೋಜನೆಯ ಒಟ್ಟು ವೆಚ್ಚದ ಶೇಕಡ ೨೬ ಹಣವನ್ನು ಪೇರು ಬಂಡವಾಳ ರೂಪದಲ್ಲಿ ಒದಗಿಸುವುದು.

(ಇ) ಬಾಕಿ ಶೇಕಡ ೯ ಹಣವನ್ನು ಸಂಘವು ಹೊಂದಿಸಿಕೊಳ್ಳಬೇಕಾಗುವುದು. ಉಪ್ಪಿನಕಾಯಿ, ಕಾಫಿಪುಡಿ, ಬೇಕರಿ, ಮಸಾಲೆ ಸಾಮಾನುಗಳು, ಹಣ್ಣಿನ ರಸ, ಮುಂತಾದ ವಸ್ತುಗಳನ್ನು ಉತ್ಪಾದಿಸಲು ಮುಂದೆ ಬಂದ ಸಹಕಾರಿ ಸಂಸ್ಥೆಗಳಿಗೆ ಮೇಲ್ಕಂಡಂತೆ ಸಹಾಯ ಒದಗಿಸಲಾಗುತ್ತದೆ.

---

* ಸದಸ್ಯರು ಹಾಜರಿರಲಿಲ್ಲ.

(ii) ಯಾವುದೇ ಶಕ್ತ ಬಳಕೆದಾರರ ಸಹಕಾರ ಸಂಘಗಳು ಮೇಲ್ಕಾಣಿಸಿದಂತಹ ಚಿಕ್ಕಪುಟ್ಟ ಯೋಜನೆಗಳನ್ನು ರೂಪಿಸಿದಲ್ಲಿ ಅದಕ್ಕೆ ಅಗತ್ಯವಿರುವ ಧನಸಹಾಯವನ್ನು ದೆಹಲಿಯಲ್ಲಿರುವ ರಾಷ್ಟ್ರೀಯ ಸಹಕಾರಿ ನಿಗಮದ ಸಹಾಯದಿಂದ ರಾಜ್ಯ ಸರಕಾರವು ಮಂಜೂರು ಮಾಡುವುದು, ಅಲ್ಲದೆ ಎಲ್ಲಾ ಬಗೆಯ ಪ್ರೋತ್ಸಾಹವನ್ನು ಕೊಡುವುದು.

ರಾಜ್ಯದಲ್ಲಿ ಆಕ್ಟ್ರಾಯ್ ಪದ್ಧತಿಯನ್ನು ರದ್ದುಪಡಿಸಿರುವುದು

೩೮. ಶ್ರೀ ಬಿ. ಬೈರಪ್ಪಾಜಿ (ತುರವೇಕೆರೆ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದ ನಗರಸಭೆಗಳು ಹಾಗೂ ಪುರಸಭೆಗಳಿಗೆ ಆಕ್ಟ್ರಾಯ್ ರದ್ದುಪಡಿಸಿದ ತಾರೀಖಿನಿಂದ ಸರಕಾರದವರು ನಗರಸಭೆಗಳು ಹಾಗೂ ಪ್ರತಿ ಪುರಸಭೆಗಳಿಗೆ ಕೊಡುತ್ತಿರುವ ಅನುದಾನದ ಪೊತ್ತವೆಷ್ಟು ?

ಆ) ಆಕ್ಟ್ರಾಯ್ ರದ್ದು ಮಾಡಿರುವುದರಿಂದ ನಗರಸಭೆಗಳಿಗೆ ಹಾಗೂ ಪುರಸಭೆಗಳು ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿ ಅವಶ್ಯಕವಾಗಿ ಸಾರ್ವಜನಿಕವಾಗಿ ಮಾಡಲೇಬೇಕಾದ ಕೆಲಸಗಳನ್ನು ಮಾಡಲು ಸಾಧ್ಯವಿಲ್ಲದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಇ) ಸರಕಾರವೇ ರಚಿಸಿದ್ದ ಶ್ರೀ ಖಾರ್ಗೆ ಸಮಿತಿಯು ಆಕ್ಟ್ರಾಯ್ ರದ್ದುಪಡಿಸಕೂಡದೆಂದು ವರದಿ ಕೊಟ್ಟಿರುವುದು ನಿಜವೆ ?

ಈ) ಹಾಗಿದ್ದಲ್ಲಿ ಆಕ್ಟ್ರಾಯ್ ಜಾರಿಗೆ ತರುವುದನ್ನು ಸರಕಾರದವರು ಪುನಃ ಪರಿಶೀಲಿಸುವರೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು),—

ಅ) ಲಗತ್ತಿಸಿದ ಪಟ್ಟಿಯಲ್ಲಿ ವಿವರಿಸಿದೆ.

ಆ) ಬಂದಿದೆ.

ಇ) ನಿಜ.

ಈ) ಇಲ್ಲ.